ನಿನ್ನೆಯಾಗಬಹುದು; ಅದೇ ರೀತಿಯಲ್ಲಿ ನಾಳೆಯು ಈ ದಿನವಾಗಬಹುದು. ಇದುವೇ ಸಮಯವನ್ನು ಕುರಿತಾದ ಅಮೂಲ್ಯ ಸತ್ಯ. ಸಮಯ ಎನ್ನುವುದು ಹಲವಾರು ಸತ್ಯಗಳ ಆಗರ. ನಮ್ಮ ಬದುಕಿನಲ್ಲಿಯೂ ಸಮಯವನ್ನು ಕುರಿತಾದ ಸತ್ಯದ ಬಗ್ಗೆ ನಮಗೆ ಹಲವಾರು ಭ್ರಮೆಗಳಿರುತ್ತವೆ. ಹಲವು ಬಾರಿ ಭ್ರಮೆಗಳೇ ಸತ್ಯದಂತೆ ಭಾಸವಾಗುತ್ತವೆ; ಗೋಚರಿಸುತ್ತವೆ. ಈ ರೀತಿಯಲ್ಲಿ ಸಮಯವು ವಿವಿಧ ವೈರುಧ್ಯಗಳಿಂದ ತುಂಬಿಹೋಗಿದೆ. ಹಾಗಿದ್ದರೂ ಅದು ಸದಾ ಕಾಲ ಒಂದು 'ಸನ್ನಿವೇಶ'ವಾಗಿ ನಮಗೆ ಕಾಣಿಸಿಕೊಳ್ಳುತ್ತದೆ.

ನಾನು ಯಾವತ್ತೂ ನನ್ನ ಕವಿತೆಗಳ ವಿಮರ್ಶೆಗೆ ಹೋದವನಲ್ಲ (ಹತ್ತಾರು ಬಾರಿ ಓದಿ, ಅವುಗಳಲ್ಲಿನ ತಪ್ಪುಗಳನ್ನು ತಿದ್ದಿದ್ದೇನೆ; ಸಂದರ್ಭಕ್ಕೆ ಅನುಗುಣವಾಗಿ ಸಾಲುಗಳನ್ನು ಬದಲಾಯಿಸಿದ್ದೇನೆ). ನನ್ನ ಕವಿತೆಗಳ ಬಗ್ಗೆ ಬೇರೆಯವರ ಅಭಿಪ್ರಾಯವನ್ನು ಕೇಳಿ ಖುಷಿಗೊಂಡಿದ್ದೇನೆ ಅಥವಾ ತಿದ್ದಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ನನ್ನ ಬರಹವೇ ಶ್ರೇಷ್ಠ ಎಂದು ಯಾವತ್ತೂ ವಾದಿಸುವುದಿಲ್ಲ. ನನ್ನ ಕವಿತೆಗಳಲ್ಲಿ ಬಿಂಬ, ಪ್ರತಿಬಿಂಬ, ಉಪಮೆ, ಅಲಂಕಾರ ಇತ್ಯಾದಿಗಳನ್ನು ಕುರಿತಾಗಿ ನಾನು ಯಾವತ್ತೂ ಗಂಭೀರವಾಗಿ ಯೋಚಿಸಿಲ್ಲ. ಇತರ ಕವಿಗಳ ಕವನಗಳೊಂದಿಗೆ ನನ್ನ ಕವನಗಳನ್ನು ಹೋಲಿಕೆ ಮಾಡುವ ಪ್ರಯತ್ನವನ್ನೂ ಮಾಡಿಲ್ಲ. ಹಾಗಾಗಿ, ವಿಮರ್ಶೆ, ವಿಶ್ಲೇಷಣೆ ಇವುಗಳ ಬಗ್ಗೆ ನಾನು ಪ್ರತಿಕ್ರಿಯಿಸಲಾರೆ.

◆ **ನೀವು ಕವನ ಬರೆಯಬೇಕೆಂದುಕೊಂಡ ವಸ್ತು ಕಥೆ-ಕಾದಂಬರಿಯಾದ ಅಥವಾ ಕಥೆ-ಕಾದಂಬರಿ ಬರೆಯಬೇಕೆಂದುಕೊಂಡ ವಿಷಯ ಕವನವಾದ ಉದಾಹರಣೆಗಳು ಇವೆಯೇ? ಗದ್ಯ ಅಥವಾ ಪದ್ಯದ ರಚನೆಗೆ ವಸ್ತುವನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳುತ್ತೀರಿ?**

ನನ್ನ ಯಾವುದೇ ಕಾವ್ಯವಸ್ತುವೂ ಕಥೆ-ಕಾದಂಬರಿಯಾಗಿಲ್ಲ. ಆದರೆ ಕಥೆ-ಕಾದಂಬರಿ ಬರೆಯುವ ಸಂದರ್ಭದಲ್ಲಿ ಕೆಲವು ಶಬ್ದಗಳು ಅಥವಾ ವಾಕ್ಯಗಳು ಕೆಲವೊಮ್ಮೆ ಇದ್ದಕ್ಕಿದ್ದಂತೆ ಕಾವ್ಯವೊಂದರ ಹುಟ್ಟಿಗೆ ಕಾರಣವಾದ ಉದಾಹರಣೆಗಳಿವೆ. ಅಂತಹ ಸಂದರ್ಭಗಳಲ್ಲಿ, ಕವನವನ್ನು ಬರೆಯಲೇಬೇಕು ಎನ್ನುವ ತುಡಿತ ನನ್ನೊಳಗೆ ಮೂಡಿಬಿಡುತ್ತದೆ. ಈ ರೀತಿಯಲ್ಲಿ, ಗದ್ಯವನ್ನು ಬರೆಯುವಾಗ ಆಗಾಗ ಪದ್ಯ ಹುಟ್ಟಿಕೊಳ್ಳುತ್ತದೆ. ಕೆಲವು ಸಲ ನಾನು ರಾತ್ರಿ ಮಲಗಿದಾಗ ಕಾವ್ಯದ ಒಂದೆರಡು ಪದಗಳು ಮನಸ್ಸಿನಲ್ಲಿ ಮೂಡುತ್ತವೆ. ಆಗ ಅದನ್ನು ಬರೆದುಕೊಳ್ಳುವಂತೆ ನನ್ನ ಮಗನಿಗೆ (ಶಾಶ್ವತ್) ಹೇಳುತ್ತೇನೆ. ಬೆಳಗ್ಗೆ ಆತ ಏಳುವುದಕ್ಕಿಂತ ಮೊದಲೇ ಆ ಪದಗಳು ಕಾವ್ಯರೂಪವನ್ನು ಪಡೆದುಬಿಟ್ಟಿರುತ್ತವೆ. ಕಾವ್ಯದ ರಚನೆಗೆ ಯಾವುದೇ ನಿರ್ದಿಷ್ಟ ಕ್ರಮ ಅಥವಾ ಸಮಯ ಎನ್ನುವುದು ಇರುವುದಿಲ್ಲ. ಆದರೆ ಪ್ರತಿಯೊಂದು ಗದ್ಯ ಅಥವಾ ಪದ್ಯದ ರಚನೆಗೂ ತನ್ನದೇ ಆದ ವಿಶಿಷ್ಟ ರಚನಾತ್ಮಕ ಕ್ರಮಗಳು ಇರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ಬರಹಗಾರನ ಅನುಭವವೂ, ವ್ಯಾಖ್ಯಾನವೂ ವಿಭಿನ್ನವಾಗಿರಬಹುದು.

◆ **ನೀವು ಸಾಹಿತ್ಯ ರಚನೆ ಮಾಡುವುದಕ್ಕೆ ಯಾವುದಾದರೂ ಪ್ರಮುಖ ಘಟನೆ ಕಾರಣವಾಯಿತೇ? ಮೊದಲಿಗೆ ನೀವು ರಚಿಸಿದ್ದು ಪದ್ಯವನ್ನೋ ಅಥವಾ ಗದ್ಯವನ್ನೋ?**

ನಾನು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸುವುದಕ್ಕೆ ಯಾವುದೇ ನಿರ್ದಿಷ್ಟ ಘಟನೆಯೂ ಕಾರಣವಲ್ಲ. ನಮ್ಮದು ಜಂಟಿ ಕುಟುಂಬ. ನನ್ನ ತಂದೆ (ಶಿವಗೋಪಾಲ ಶುಕ್ಲ) ಮತ್ತು ತಾಯಿ (ರುಕ್ಮಿಣಿ ದೇವಿ) ಇಬ್ಬರೂ ಸರಳ ಜೀವಿಗಳು; ಸಹೃದಯಿಗಳು. ಮನೆಯ ಇತರ ಸದಸ್ಯರೂ ಸಾಮರಸ್ಯದಿಂದ ಜೀವನ ನಡೆಸುತ್ತಿದ್ದರು. ನಾನು ಜನಿಸಿದ ರಾಜನಂದಾಗಾಂವ್ ಹಿಂದೊಮ್ಮೆ ಬೈರಾಗಿ ಅರಸರ ರಾಜಧಾನಿಯಾಗಿತ್ತು; ಸುಸಂಸ್ಕೃತಿಯ ಬೀಡಾಗಿತ್ತು. ಸುತ್ತಮುತ್ತಲಿನ ಸುಂದರ ಪ್ರಕೃತಿ ಸೌಂದರ್ಯ ನನ್ನ ಮನಸ್ಸನ್ನು ಸದಾ ಉಲ್ಲಸಿತಗೊಳಿಸುವಂತಿತ್ತು. ಬೆಟ್ಟಗುಡ್ಡ, ಹಳ್ಳಕೊಳ್ಳ ನದಿ, ಪ್ರಾಣಿಪಕ್ಷಿ ಎಲ್ಲವೂ ನಮ್ಮ ಊರನ್ನು ಶ್ರೀಮಂತಗೊಳಿಸಿದ್ದವು. ನನ್ನ ಕವಿಹೃದಯದಲ್ಲಿ ಕವನ ಹುಟ್ಟುವುದಕ್ಕೆ ಇದಕ್ಕಿಂತಲೂ ಉತ್ತಮ ವಾತಾವರಣ ಇನ್ನೇನು ಬೇಕು?

ನಾನು ಮೊದಲು ಬರೆದಿದ್ದು ಕವನವನ್ನು. ಆದರೆ ಮೊದಲ ಬಾರಿಗೆ ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಕಥೆ. ನಾನು ಕೃಷಿ ಮಹಾವಿದ್ಯಾಲಯದಲ್ಲಿ ಪ್ರಥಮ ಅಥವಾ